# ಹಳೇ ವೇಳಾಪಟ್ಟಿಯಂತೆ ಮೆಟ್ರೋ ಸಂಚಾರ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನೇರಳೆ ಮೆಟ್ರೋ ಮಾರ್ಗದಲ್ಲಿ ಏಕಾಏಕಿ 10 ರೈಲುಗಳ ಸಂಚಾರ ಹೆಚ್ಚಿಸಿದ್ದು ವಿದ್ಯುತ್ ಸರಬರಾಜು ವ್ಯವಸ್ಥೆಯಲ್ಲಿ ಸಮಸ್ಯೆಗೆ ಕಾರಣ ಎಂದು ಅರಿವಾದ ಹಿನ್ನೆಲೆಯಲ್ಲಿ ಹಳೇ ವೇಳಾಪಟ್ಟಿಯಂತೆ ರೈಲುಗಳ ಸಂಚಾರ ನಿರ್ವಹಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ಏರಿಕೆಯಾಗುತ್ತಿರುವ ಪ್ರಯಾಣಿಕ ದಟ್ಟಣೆ ಪರಿಹರಿಸಲು ಜ.2 ರಿಂದ ನಾಗಸಂದ್ರ-ಯಲಚೇನಹಳ್ಳಿ ಮಾರ್ಗದಲ್ಲಿ 3 ಹಾಗೂ ನಾಯಂಡಹಳ್ಳಿ-ಬೈಯಪ್ಪನಹಳ್ಳಿ ಮಾರ್ಗದಲ್ಲಿ 10 ಟ್ರಿಪ್ ಹೆಚ್ಚಿಸಲಾಗಿತ್ತು. ದಟ್ಟಣೆ ಅವಧಿಯಲ್ಲಿ ಪ್ರತಿ ಮೂರೂವರೆ ನಿಮಿಷಕ್ಕೆ ಸಂಚಾರ ವ್ಯವಸ್ಥೆ ಮಾಡಲಾಗಿತ್ತು. ಇದರಿಂದಾಗಿ ಜ. 2ರ ಬೆಳಗ್ಗೆ 10.02ರಿಂದ 10.30ರವರೆಗೆ ಮತ್ತು ಸಂಜೆ 6 ನಿಮಿಷ ಸಂಚಾರ ಸ್ಥಗಿತವಾಗಿತ್ತು.

**» ಟ್ರಿಪ್ ಹೆಚ್ಚಳವೇ ವಿದ್ಯುತ್ ಸಮಸ್ಯೆಗೆ ಕಾರಣ**

ನೇರಳೆ ಮಾರ್ಗದಲ್ಲಿ ಪ್ರತಿದಿನ 27 ರೈಲುಗಳು ಮಾಡುತ್ತಿದ್ದ 157 ಟ್ರಿಪ್‌ಗಳನ್ನು 167ಕ್ಕೆ ಹೆಚ್ಚಿಸಲಾಗಿತ್ತು. ಅದೇ ರೀತಿ ನಾಗಸಂದ್ರ- ಯಲಚೇನಹಳ್ಳಿ ಹಸಿರು ಮಾರ್ಗದಲ್ಲೂ ಟ್ರಿಪ್ ಸಂಖ್ಯೆ 120ರಿಂದ 123ಕ್ಕೆ ಏರಿಕೆಯಾಗಿತ್ತು. ಇದೀಗ ಹಿಂದಿನಂತೆ ದಟ್ಟಣೆ ಅವಧಿಯಲ್ಲಿ 4 ನಿಮಿಷಕ್ಕೊಮ್ಮೆ ಹಾಗೂ ಗರಿಷ್ಠ 9-10 ನಿಮಿಷಕ್ಕೆ ರೈಲುಗಳು ಸಂಚರಿಸಲಿವೆ.

# 12 ಭ್ರಷ್ಟ ಸರಕಾರಿ ಅಧಿಕಾರಿಗಳ ನಿವಾಸಗಳ ಮೇಲೆ ಎಸಿಬಿ ದಾಳಿ



ದಾವಣಗೆರೆ ಶಿವಕುಮಾರ ಬಡಾವಣೆಯಲ್ಲಿರುವ ಎಇಇ ಜಗದೀಶಪ್ಪ ಅವರ ಮನೆ.

■ **ವಿಕ ಸುದ್ದಿಲೋಕ** ಬೆಂಗಳೂರು

ಭ್ರಷ್ಟ ಸರಕಾರಿ ಅಧಿಕಾರಿಗಳ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಅಧಿಕಾರಿಗಳು ಗುರುವಾರ ಬೆಳ್ಳಂಬೆಳಗ್ಗೆ ರಾಜ್ಯದ 12 ಅಧಿಕಾರಿಗಳ ನಿವಾಸಗಳ ಮೇಲೆ ದಾಳಿ ನಡೆಸಿದ್ದಾರೆ.

ಬಿಬಿಎಂಪಿ ಹಾಗೂ ಬಿಡಿಎ ಅಧಿಕಾರಿಗಳು ಸೇರಿದಂತೆ ಬೆಂಗಳೂರು ನಗರದಲ್ಲೇ ನಾಲ್ವರು ಅಧಿಕಾರಿಗಳ ನಿವಾಸಗಳು, ಕರ್ನಾಟಕ ವಿದ್ಯುತ್ ನಿಗಮ, ನೀರಾವರಿ ನಿಗಮ, ಪಂಚಾಯತ್ ರಾಜ್ ಇಲಾಖೆ, ಲೋಕೋಪಯೋಗಿ ಸೇರಿದಂತೆ ಹಲವು ಇಲಾಖೆಯ ಅಧಿಕಾರಿಗಳ ಮನೆ, ಕಚೇರಿ ಹಾಗೂ ಸಂಬಂಧಿಕರ ಮನೆ ಮೇಲೆ ಆದಾಯಕ್ಕೂ ಮೀರಿ ಆಸ್ತಿ ಗಳಿಕೆ ಆರೋಪದಲ್ಲಿ ಏಕಕಾಲದಲ್ಲಿ ದಾಳಿ ನಡೆಸಿ ಅಪಾರ ಪ್ರಮಾಣದ ಆಸ್ತಿ ಪಾಸ್ತಿ ಪತ್ತೆ ಮಾಡಲಾಗಿದೆ.

ದಾಳಿ ವೇಳೆ ಪತ್ತೆಯಾಗಿರುವ ಆಸ್ತಿ ವಿವರಗಳನ್ನು ಶೋಧ ಕಾರ್ಯ ಮುಕ್ತಾಯಗೊಂಡ ಬಳಿಕ ಒದಗಿಸಲಾಗುವುದು ಎಂದು ಎಸಿಬಿಯ ಹಿರಿಯ ಅಧಿಕಾರಿಗಳು ತಿಳಿಸಿದರು.

ಡಿ.13ರಂದು ರಾಜ್ಯದ 11 ಸರಕಾರಿ ಅಧಿಕಾರಿಗಳ ನಿವಾಸಗಳ ಮೇಲೆ ದಾಳಿ ನಡೆಸಿದ್ದ ಎಸಿಬಿ ಅಧಿಕಾರಿಗಳು, ಅಧಿಕಾರಿಗಳ ಕೋಟ್ಯಂತರ ರೂ. ಮೌಲ್ಯದ ಆದಾಯಕ್ಕೂ ಮೀರಿ ಆಸ್ತಿ ಪತ್ತೆ ಮಾಡಿದ್ದರು.

## ಟಿವಿಸಿಸಿ ಪ್ರಭಾರ ಎಂಜಿನಿಯರ್ ಮನೆ ಮೇಲೆ ದಾಳಿ

**ಸಮೂಹ ಸಾರಿಗೆ 'ಪಾಡ್ ಟ್ಯಾಕ್ಸಿ' ಜಾರಿ ಯೋಜನೆ ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿಬಿಎಂಪಿ ಆಯುಕ್ತರ ಅಧೀನದ ವಿಚಕ್ಷಣಾ ಘಟಕದ (ಟಿವಿಸಿಸಿ) ಪ್ರಭಾರ ಎಂಜಿನಿಯರ್ ಬಿ.ಎಸ್ ಪ್ರಹ್ಲಾದ್ ಅವರ ಮನೆ ಹಾಗೂ ಕಚೇರಿಗಳ ಮೇಲೆ ಆದಾಯಕ್ಕೂ ಮೀರಿ ಆಸ್ತಿ ಗಳಿಕೆ ಆರೋಪದಲ್ಲಿ ಎಸಿಬಿ ದಾಳಿ ನಡೆದಿದೆ.**

## ದಾಳಿಗೊಳಗಾದ ಅಧಿಕಾರಿಗಳ ವಿವರ

- ಎಸ್.ಆರ್.ಎಂ ನಾಗರಾಜನ್, ಅಧೀಕ್ಷಕ ಎಂಜಿನಿಯರ್ (ಎಲೆಕ್ಟ್ರಿಕಲ್) ಒ ಮತ್ತು ಎಂ ಬೆಸ್ಕಾಂ, ಕೆಪಿಟಿಸಿಎಲ್, ಕೆಂಗೇರಿ ಬೆಂಗಳೂರು.
- ಬಿ.ಎಸ್ ಪ್ರಹ್ಲಾದ್, ಅಧೀಕ್ಷಕ ಎಂಜಿನಿಯರ್, ರಸ್ತೆ ಮತ್ತು ಮೂಲಸೌಕರ್ಯ ಹಾಗೂ ಬಿಬಿಎಂಪಿ ಟಿವಿಸಿಸಿಯ ಪ್ರಭಾರ ಮುಖ್ಯ ಅಭಿಯಂತರ.
- ಬಿ.ಟಿ ಕುಮಾರಸ್ವಾಮಿ, ಉಪ ವಿಭಾಗಾಧಿಕಾರಿ, ಬಳ್ಳಾರಿ.
- ಆರ್.ವಿ ಕಾಂತರಾಜು, ಉಪ ನಿರ್ದೇಶಕರು, ನಗರ ಯೋಜನೆ, ಬಿಡಿಎ ಬೆಂಗಳೂರು.
- ಬಿ.ಎಸ್ ಬಾಲನ್, ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್, ಕರ್ನಾಟಕ ನೀರಾವರಿ ನಿಗಮ, ಕಲ್ಲಿಹಾಳ, ಭದ್ರಾವತಿ.
- ಜೆ.ಸಿ ಜಗದೀಶಪ್ಪ, ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್, ಕೆಪಿಟಿಸಿಎಲ್, ಹೊನ್ನಾಳಿ, ದಾವಣಗೆರೆ.
- ವೆಂಕಟೇಶ್, ಸಹಾಯಕ ಎಂಜಿನಿಯರ್, ಲೋಕೋಪಯೋಗಿ ಇಲಾಖೆ, ಸಕಲೇಶಪುರ, ಹಾಸನ.
- ಅಶೋಕ್ ಗೌಡಪ್ಪ ಪಾಟೀಲ್, ಕಾರ್ಯ ನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯಿತಿ, ನರಗುಂದ, ಗದಗ.
- ಸೋಮಪ್ಪ ಟಿ. ಲಮಾಣಿ, ಕಾರ್ಯಾಧೀಕ್ಷಕರು, ಜಿಲ್ಲಾ ಪಂಚಾಯತ್ ಎಂಜಿನಿಯರಿಂಗ್ ವಿಭಾಗ, ವಿಜಯಪುರ.
- ರೇಖಾ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವಾಜರಹಳ್ಳಿ ಗ್ರಾಮ ಪಂಚಾಯಿತಿ, ನೆಲಮಂಗಲ.
- ನರಸಿಂಹಲು, ತೆರಿಗೆ ಮೌಲ್ಯ ಮಾಪಕರು, ಸಿವಿ ರಾಮನ್ ನಗರ ಉಪ ವಿಭಾಗ, ಬಿಬಿಎಂಪಿ ಬೆಂಗಳೂರು.
- ಅಮರೇಶ ಬೆಂಚಮರಡಿ, ಸ್ಯಾನಿಟರಿ ಇನ್‌ಸ್ಪೆಕ್ಟರ್, ನಗರ ಸಭೆ ರಾಯಚೂರು.

## ಎಸಿ ಮನೆಯಲ್ಲಿ 7 ತಾಸು ತಪಾಸಣೆ

**ಬಳ್ಳಾರಿ:** ಇಲ್ಲಿನ ಉಪವಿಭಾಗಾಧಿಕಾರಿ ಕುಮಾರಸ್ವಾಮಿ ಅವರ ಸರಕಾರಿ ನಿವಾಸ ಮತ್ತು ಕಚೇರಿ ಮೇಲೆ ಎಸಿಬಿ ಅಧಿಕಾರಿಗಳ ತಂಡ ಗುರುವಾರ ದಾಳಿ ಮಾಡಿತು. 7 ತಾಸುಗಳವರೆಗೆ ಪರಿಶೀಲನೆ ನಡೆಸಿದರೂ ಈ ತಂಡಕ್ಕೆ ಯಾವುದೇ ದಾಖಲೆಗಳು ಸಿಕ್ಕಿಲ್ಲ ಎನ್ನಲಾಗಿದೆ. ಬೆಂಗಳೂರಿನ ಎಸಿಬಿ ಎಡಿಜಿಪಿ ಅಲೋಕ್ ಮೋಹನ್ ಮತ್ತು ಎಸ್ಪಿ ವಂಶಿಕೃಷ್ಣ ಮಾರ್ಗದರ್ಶನದಲ್ಲಿ ದಾವಣಗೆರೆ ಎಸಿಬಿ ಇನ್‌ಸ್ಪೆಕ್ಟರ್‌ಗಳಾದ ತಿಪ್ಪೇಸ್ವಾಮಿ ಮತ್ತು ಸಲೀಂ ನೇತೃತ್ವದ 6 ಅಧಿಕಾರಿಗಳ ತಂಡ ದಾಳಿಮಾಡಿದೆ.

## ಹೊನ್ನಾಳಿ ಎಇಇಗೆ ಏಳು ಮನೆ

**ದಾವಣಗೆರೆ:** ಹೊನ್ನಾಳಿಯ ಬೆಸ್ಕಾಂ ಕಚೇರಿಯ ಎಇಇ ಜಗದೀಶಪ್ಪ ಅವರು ಏಳು ಮನೆಗಳನ್ನು ಹೊಂದಿರುವುದು ದಾಳಿ ಸಂದರ್ಭ ಬೆಳಕಿಗೆ ಬಂದಿದೆ. ದಾವಣಗೆರೆಯಲ್ಲಿ ಮೂರು ಮನೆ, ಧಾರವಾಡದಲ್ಲಿ 2, ತುಮಕೂರಿನಲ್ಲಿ 1, ಬೆಂಗಳೂರಿನಲ್ಲಿ 1 ನಿವೇಶನ, ಹೊಸದುರ್ಗ ತಾಲೂಕಿನ ಚಿಕ್ಕಮ್ಮನಹಳ್ಳಿಯಲ್ಲಿ 5 ಎಕರೆ, ಹೊಳಲ್ಕೆರೆಯ ಚಿಕ್ಕಜಾಜೂರಿನಲ್ಲಿ 20 ಎಕರೆ ಜಮೀನು ಸೇರಿದಂತೆ ಕೋಟ್ಯಂತರ ರೂ. ಬೆಲೆಬಾಳುವ ಆಸ್ತಿ ಹೊಂದಿದ್ದಾರೆನ್ನಲಾಗಿದೆ.

## ಎಇ 4 ನಿವೇಶನದ ಒಡೆಯ

**ಹಾಸನ:** ಸಕಲೇಶಪುರದ ಲೋಕೋಪಯೋಗಿ ಇಲಾಖೆ ಸಹಾಯಕ ಎಂಜಿನಿಯರ್ (ಎಇ) ವೆಂಕಟೇಶ್ ಅವರ ಮನೆ ಮತ್ತು ಕಚೇರಿ ಮೇಲೆ ದಾಳಿ ನಡೆಸಿ, ದಾಖಲೆ ಪರಿಶೀಲಿಸಿದರು. ವೆಂಕಟೇಶ್ ಅವರ ಹೆಸರಿನಲ್ಲಿ 1 ಮನೆ, 4 ಸೈಟ್, 2 ಬೈಕ್ ಇರುವುದು ಪತ್ತೆಯಾಗಿದೆ ಎನ್ನಲಾಗಿದೆ.

## 'ಉದಯ್' ಯೋಜನೆ ತಗ್ಗಿದ 'ಡಿಸ್ಕಾಂ' ನಷ್ಟ



2015-16ರಲ್ಲಿ ಈ ನಷ್ಟದ ಮೊತ್ತ ₹ 51,590 ಕೋಟಿಗಳಷ್ಟಿತ್ತು.

# ವಿವಿಧ ಬೇಡಿಕೆ ಈಡೇರಿಕೆಗಾಗಿ ಸಿಎಂಗೆ ಮನವಿ



**ಚನ್ನಪಟ್ಟಣ:** ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ರೈತಸಂಘ ಹಾಗೂ ಕರವೇ ಪದಾಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ರೈತಸಂಘದ ಜಿಲ್ಲಾಧ್ಯಕ್ಷ ಲಕ್ಷ್ಮಣಸ್ವಾಮಿ ಅವರ ನೇತೃತ್ವದಲ್ಲಿ ಪೊಲೀಸ್ ತರಬೇತಿ ಶಾಲೆಯಲ್ಲಿನ ಹೆಲಿಪ್ಯಾಡ್ ಬಳಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ರೈತಸಂಘದ ಪದಾಧಿಕಾರಿಗಳು, ಶಾಶ್ವತ ಕುಡಿಯುವ ನೀರಿನ ಯೋಜನೆ ಹಾಗೂ ವ್ಯವಸಾಯ ಮತ್ತು ವಿದ್ಯುತ್‌ಗಾಗಿ ಮೇಕೆದಾಟು ಯೋಜನೆಯನ್ನು ಶೀಘ್ರ ಅನುಷ್ಠಾನಗೊಳಿಸಬೇಕು ಮತ್ತು ಮುಂದಿನ ಬಜೆಟ್‌ನಲ್ಲಿ ಯೋಜನೆಗೆ ತಗಲುವ ವೆಚ್ಚವನ್ನು ಮೀಸಲಿಡಬೇಕು ಎಂದು ಮನವಿ ಮಾಡಿಕೊಂಡರು.

ರೈತರ ಎಲ್ಲ ಸಾಲಗಳನ್ನೂ ಮನ್ನಾ ಮಾಡಬೇಕು. ಪ್ರತಿಯೊಬ್ಬ ರೈತರಿಗೂ ಸಾಲ ಸಿಗುವಂತೆ ಮಾಡಬೇಕು, ರೈತರ ಬೆಳೆಗಳಿಗೆ ಸೂಕ್ತ ಬೆಲೆ ನಿಗದಿ ಮಾಡಬೇಕು, ಶೀಥಲೀಕರಣ ಕೇಂದ್ರಗಳನ್ನು ಸ್ಥಾಪಿಸಬೇಕು, ರೇಷ್ಮೆ ಬೆಳೆಗೆ ಸುಸಜ್ಜಿತ ಮಾರುಕಟ್ಟೆ, ರೇಷ್ಮೆನೂಲು ತೆಗೆಯುವ ಗಿರಣಿಯನ್ನು ಆರಂಭಿಸಬೇಕೆಂದು ಕೋರಿದರು.

ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರೈತರ ಸಾಲಮನ್ನಾ ಹಾಗೂ ಮಹದಾಯಿ ಯೋಜನೆ ವಿಚಾರವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗುವುದು, ಹಾಗೆಯೇ ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಸರ್ಕಾರ ಸಿದ್ಧವಿದ್ದು ಶೀಘ್ರ ಎಲ್ಲ ವಿವಾದವನ್ನು ಬಗೆಹರಿಸಿಕೊಂಡು ಆರಂಭಿಸಲಾಗುವುದು ಎಂದು ಭರವಸೆ ನೀಡಿದರು. ರೈತಸಂಘದ ಬೈರೇಗೌಡ, ಸಂಪತ್‌ಕುಮಾರ್, ಚೆಲುವಯ್ಯ, ರಮೇಶ್, ಗೋವಿಂದರಾಜು, ಸಾಗರ್, ಎಂ.ಎನ್.ಸತ್ಯನಾರಾಯಣ, ಯುವ ಘಟಕದ ನಿತಿನ್, ಪದಾಧಿಕಾರಿಗಳಾದ ರಘುರಾಮ್, ಆಸಿಫ್, ವಿನಯ್, ಶ್ರೀಕಾಂತ್, ಮರಿಸ್ವಾಮಿ, ಲೋಕೇಶ್, ನಾಗರಾಜು, ಸುಮಂತ್ ಸೇರಿದಂತೆ ಹಲವರಿದ್ದರು.

# ನಾಳೆ ವಿದ್ಯುತ್ ವ್ಯತ್ಯಯ

**ಬೆಂಗಳೂರು:** ಕೇಬಲ್‌ಗಳ ಬದಲಾವಣೆ ಕಾರ್ಯ ಕೈಗೊಳ್ಳಲಿರುವ ಹಿನ್ನೆಲೆಯಲ್ಲಿ ಜ.6ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ವಿಕ್ಟೋರಿಯಾ ಮಸ್ ವ್ಯಾಪ್ತಿಗೆ ಬರುವ ಚಾಮರಾಜಪೇಟೆ 5ನೇ ಮುಖ್ಯರಸ್ತೆ, ಬ್ರಿಯಾಂಡ್ ರಸ್ತೆ, ಪೊಲೀಸ್ ಕ್ವಾಟ್ರರ್ಸ್, ಟಿಸಿಎಂ ರಾಯನ್ ರಸ್ತೆ, ಚೆಲುವಾದಿಪಾಳ್ಯ, ಸಿದ್ಧಾರ್ಥನಗರ, ಜೈಭೀಮ್ ನಗರ, ಅಂಜನಪ್ಪ ಲೇನ್, ವಜ್ರೇಶ್ವರಿ ಸಾ ಮಿಲ್, ಸಿಎಆರ್ ಪೊಲೀಸ್ ಕ್ವಾಟ್ರರ್ಸ್, ಎನ್‌ಟಿ. ಪೇಟೆ, ಕಾಟನ್ ಪೇಟೆ, ಚಾಮರಾಜಪೇಟೆ, ಬುಲ್‌ಟೆಂಪಲ್ ರಸ್ತೆ, ಚಿಕ್ಕಣ್ಣ ಗಾರ್ಡನ್, ವಿವಿ ಪುರಂ, ಆರ್.ವಿ. ರಸ್ತೆ, ಕೆಆರ್. ರಸ್ತೆ, ಗಾಂಧಿಬಜಾರ್, ಬ್ಯುಗಲ್ ರಾಕ್, ಗೋವಿಂದಪ್ಪ ರಸ್ತೆ, ಕೆ.ಆರ್. ಮಾರ್ಕೆಟ್ ರಸ್ತೆ, ಮಿನರ್ವ ಸರ್ಕಲ್, ಜೆಸಿ ರಸ್ತೆ, ಬಿವಿಕೆ ಅಯ್ಯಂಗಾರ್ ರಸ್ತೆ, ಗೋರಿಪಾಳ್ಯ, ಎಚ್.ಬಿ. ಸಮಾಜ, ವಾಣಿ ವಿಲಾಸ ರಸ್ತೆ, ವಿವಿ ಪುರ ಕಾಲೇಜು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.




15 ಅಡಿ ಉದ್ದದ ವಾಹನ | ಶುದ್ಧ ನೀರಿನ ಘಟಕವೂ ಇದೆ

ಸೋಲಾರ್ ಪ್ಯಾನೆಲ್, ಸಿಸಿ ಕ್ಯಾಮೆರಾ ಅಳವಡಿಕೆ

# ಕವಿಕಾ

ಮೈಸೂರು ರಸ್ತೆಯ ಬ್ಯಾಟರಾಯನಪುರದಲ್ಲಿರುವ ಕರ್ನಾಟಕ ವಿದ್ಯುತ್ ಕಾರ್ಖಾನೆ ಬೆಂಗಳೂರಿನ ಪ್ರಮುಖ ವಿದ್ಯುತ್ ಕಾರ್ಖಾನೆಗಳಲ್ಲಿ ಒಂದು. ಇದು 1934ರಲ್ಲಿ ಎರಡು ಕೋಟಿ ರೂ ಬಂಡವಾಳದಲ್ಲಿ ಆರಂಭವಾಯಿತು. 450 ಮಂದಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಈ ಸಂಸ್ಥೆಯು 3000 ಕೆವಿಎ ವರೆಗಿನ ಶ್ರೇಣಿಯ ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್‌ಗಳನ್ನು ತಯಾರಿಸುವುದಲ್ಲದೆ ಅವುಗಳ ಮಾರುಕಟ್ಟೆ ವ್ಯವಸ್ಥೆಯನ್ನು ಸಹ ನೋಡಿಕೊಳ್ಳುತ್ತಿದೆ. ಒಟ್ಟು 4 ಲಕ್ಷ ಕೆ.ವಿ.ಎ ವಾರ್ಷಿಕ ಸ್ಥಾಪಿತ ಸಾಮರ್ಥ್ಯ ಉಳ್ಳ ಈ ಸಂಸ್ಥೆಯು ಶೇ.145ರಷ್ಟು ಸ್ಥಾಪಿತ ಸಾಮರ್ಥ್ಯದ ಬಳಕೆ ಮಾಡಿ 1994ರಲ್ಲಿ ಶೇ. 83.2ರಷ್ಟು ಗುರಿ ಸಾಧನೆ ಮಾಡಿತು. ಆನಂತರ ಟ್ರಾನ್ಸ್‌ಫಾರ್ಮರ್‌ಗಳ ಜೊತೆಗೆ ಟ್ರಾನ್ಸ್‌ಮಿಷನ್ ಗೋಪುರಗಳನ್ನೂ ನಿರೆತ್ತುವ ಪಂಪಿಗೆ ಬೇಕಾಗುವ ಮೋಟಾರುಗಳನ್ನೂ ಈ ಸಂಸ್ಥೆಯಲ್ಲಿ ಉತ್ಪಾದಿಸಲಾಗುತ್ತಿದೆ. ■



[illegible] 5.1.18

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ರಾಜ್ಯ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

(CIN-U04010KA2002SGC030438)

BESCOM

## ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಅಧೀಕ್ಷಕ ಇಂಜನಿಯರ್(ವಿ)., ಬೆವಿಕಂ, ಕೋಲಾರ ವೃತ್ತ ಇವರು ಶೇಕಡವಾರು ಒಟ್ಟಾರೆ ಟರ್ನ್‌ಕೀ ಆಧಾರದ ಮೇಲೆ ಕೆಳಕಂಡ ಕೆಲಸಗಳಿಗೆ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ದರಗಳು ಜಿಎಸ್‌ಟಿ ಮತ್ತು ಫೋರ್ಡ್ ಬೆಲೆಗಳು ಸೇರಿ. ಕೆಲಸದ ಹೆಸರು: ಒಂದು ವರ್ಷದ ಅವಧಿಗೆ ಒಟ್ಟಾರೆ ಟರ್ನ್‌ಕೀ ಆಧಾರದಲ್ಲಿ ದರಗುತ್ತಿಗೆಯ ಅಡಿಯಲ್ಲಿ ಗಂಗಾ ಕಲ್ಯಾಣ ಸ್ಥಾವರಗಳಿಗೆ ವಿದ್ಯುತ್ ಮೂಲಭೂತ ಸೌಕರ್ಯವನ್ನು ಒದಗಿಸಿ ವಿದ್ಯುದೀಕರಣಗೊಳಿಸುವ ಬಗ್ಗೆ. ದಿನಾಂಕ: 01.01.2018

| ವಿಚಾರಣಾ ಸಂಖ್ಯೆ | ಉಪ ವಿಭಾಗ | ಟೆಂಡರ್‌ಗೆ ನೀಡಲಾದ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಭಾಗವಹಿಸುವಿಕೆ |
|---|---|---|---|
| 20 | ಗುಡಿಬಂಡೆ | 30.87 | ಪರಿಶಿಷ್ಟ ಜಾತಿ ವರ್ಗದವರಿಗೆ |
| 21 | ಗುಡಿಬಂಡೆ | 12.51 | ಪರಿಶಿಷ್ಟ ಪಂಗಡ ವರ್ಗದವರಿಗೆ |
| 22 | ಗೌರಿಬಿದನೂರು | 30.87 | ಪರಿಶಿಷ್ಟ ಜಾತಿ ವರ್ಗದವರಿಗೆ |
| 23 | ಗೌರಿಬಿದನೂರು | 12.51 | ಪರಿಶಿಷ್ಟ ಪಂಗಡ ವರ್ಗದವರಿಗೆ |
| 24 | ಬಾಗೇಪಲ್ಲಿ | 30.87 | ಪರಿಶಿಷ್ಟ ಜಾತಿ ವರ್ಗದವರಿಗೆ |
| 25 | ಬಾಗೇಪಲ್ಲಿ | 12.51 | ಪರಿಶಿಷ್ಟ ಪಂಗಡ ವರ್ಗದವರಿಗೆ |

**ಬಿಡ್‌ಗಳು ದೊರೆಯುವ ಕಾಲಾವಧಿ:** ಬಿಡ್‌ಗಳು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: 04.01.2018 ರಿಂದ 18.01.2018 ರ 15:00 ಗಂಟೆ ಯಿಂದ ದೊರೆಯುತವೆ. **ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 18.01.2018. **ತಾಂತ್ರಿಕ ವಾಣಿಜ್ಯ ಬಿಡ್‌ಗಳನ್ನು ತೆರೆಯುವ ದಿನಾಂಕ:** 20.01.2018 ರ 16:00 ಗಂಟೆ. ಬಿಡ್‌ದಾರರು ಬಿಡ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬೇಕು. ಟೆಂಡರ್ ದರ, ಇಎಂಡಿ ಇತ್ಯಾದಿಗಳು ಸೇರಿದಂತೆ ಎಲ್ಲಾ ಪಾವತಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮಾದರಿಯಲ್ಲಿ ಮಾಡಬೇಕು. ಹೆಚ್ಚಿನ ವಿವರಗಳಿಗೆ ದಯವಿಟ್ಟು ವೆಬ್‌ಸೈಟ್ **https://eproc.karnataka.gov.in** ಗೆ ಭೇಟಿ ನೀಡಿ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912

ಸಹಿ/- ಅಧೀಕ್ಷಕ ಅಭಿಯಂತರರು (ವಿದ್ಯುತ್)
ಒ&ಎಂ ವೃತ್ತ, ಬೆವಿಕಂ, ಕೋಲಾರ.

The Hindu page No 08 5/01/2018

# BANGALORE ELECTRICITY SUPPLY COMPANY LIMITED

(Wholly owned by Government of Karnataka Undertaking)

(CIN-U04010KA2002SGC030438)

BESCOM

## SHORT TERM TENDER NOTIFICATION (through e-procurement mode)

Superintending Engineer (Ele), BESCOM, Kolar Circle invites percentage basis tender for following works on Total Turnkey basis. The quoted rates shall be FORD price inclusive of GST and levies. **Name of work:** Providing Electrical infrastructure to Ganga Kalyana installations on Total Turnkey basis under Rate Contract for a period of one year. Date: 01.01.2018

| Enq. No | Sub-Division | Approximate cost put to Tender (Rs in Lakhs) | Participation |
|---|---|---|---|
| 20 | Gudibande | 30.87 | For SC Category |
| 21 | Gudibande | 12.51 | For ST Category |
| 22 | Gowribidanur | 30.87 | For SC Category |
| 23 | Gowribidanur | 12.51 | For ST Category |
| 24 | Bagepalli | 30.87 | For SC Category |
| 25 | Bagepalli | 12.51 | For ST Category |

**Bid available period:** Bids available in e-procurement From 04.01.2018 to 18.01.2018, 15:00 Hrs. Last date for submission of Bids: 18.01.2018. Techno commercial bid opening date-20.01.2018 at 16:00 Hrs. The bidders can submit the bids through e-procurement. All the payments such as tender cost, EMD etc, shall be made through e-payment mode. For details, please visit website: **https://eproc.karnataka.gov.in.**

**For electricity related complaints call: 1912**

**Sd/- Superintending Engineer (Ele.),**
**BESCOM, O&M Circle, Kolar.**